**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1088/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ನಾರಯಣ** | ಪ್ರಾಸಾಃ 2 |
| ತಂದೆಯ/ಗಂಡನ ಹೆಸರು | | ಚಿಕ್ಕರಂಗಯ್ಯ | ಚಾಸಾಃ 3 |
| ವಯಸ್ಸು | | 55 ವರ್ಷ | |
| ಕೆಲಸ | | ಸೆಕ್ಯುರಿಟಿ ಸೂಪರ್ ವೈಸರ್ , ಬಣ್ಣಾರಿ ಅಮ್ಮನ್ ಶುಗರ್ ಫ್ಯಾಕ್ಟರಿ | ಸಾ ಪ್ರ ಬೋ |
| ವಾಸ | | ಗೋನಹಳ್ಳಿ | ದಿಃ 20/09/2022 |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

ಆರೋಪಿತರು ಗೊತ್ತು. ಚಾಸಾ-2 ಮತ್ತು 4 ಗೊತ್ತು. ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ಸ್ಥಳ ಪಂಚನಾಮೆ ಯಾಗಿದ್ದು, ಸ್ಥಳ ಪಂಚನಾಮೆ ಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆ ಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದಃ**

ದಿನಾಂಕ 30.06.2014 ರಂದು ಆರೋಪಿತರುಗಳು ಬಣ್ಣಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯಲ್ಲಿ ಅದರ ಹಿಂದಿನ ದಿನ ಗಲಾಟೆ ಮಾಡಿದ್ದರ ಸಂಬಂಧ ಚಾಸಾ-2 ರವರು ಕೃತ್ಯ ನಡೆದ ಸ್ಥಳವನ್ನು ಪೊಲೀಸರಿಗೆ ತೋರಿಸಿದ ಮೇರೆಗೆ ಅವರುಗಳು ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಬೆಳಗ್ಗೆ 11.00 ರಿಂದ 11.45

ರವರೆಗೆ ನಿಪಿ-1 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕಾರ್ಖನೆಯಲ್ಲಿಯೇ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಆದ್ದರಿಂದ ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**